# ಉಪ್ಪಿನ್ ಕಾಯಿ

ಬೆಟ್ಟದಲ್ಲಿರೋ ನೆಲ್ಲಿ ಕಾಯಿ
ಸಮುದ್ರದಲ್ಲಿರೋ ಉಪ್ಪು
ಎತ್ತಣಿಂದೆತ್ತಣ ಸಂಬಂಧವಯ್ಯಾ
ಆಯ್ತೇನಾದರು ತಪ್ಪು?

ತಪ್ಪಿಲ್ಲ ನೆಪ್ಪಿಲ್ಲ
ಉಪ್ಪಿನ್ ಕಾಯಿ ಹಾಕಿದ್ರ
ಸ್ವಲ್ಪ ನೆಲ್ಲಿ ಸ್ವಲ್ಪ ಉಪ್ಪು
ಮೆಣಸಿನ್ ಪುಡಿ ಸಾಕಷ್ಟು
ಭರಣಿಯೊಳಗೆ ಭದ್ರ

ಊಟದ ವ್ಯಾಳೆ ಒಂದೊಂದ್ಕಾಯಿ
ತಟ್ಟೆ ಮೇಲ ಬಿದ್ರ

ಎತ್ತಣ ನೆಲ್ಲಿ ಎತ್ತಣ ಉಪ್ಪು
ಹೊಟ್ಟೆ ವಳಗೆ ಥಿದ್ರ






# ಅಂಟಾರ್ಕಟಿಕಾ

ಪುಟ್ಟನು ಹೊರಟನು ಅಂಟಾರ್ಕಟಿಕಾಕ್ಕೆ
ಅಂತ
ಬಂದರು ಜನ ಬೀಳ್ಕೊಡಕೆ

ಕುರಿ ಕೊಟ್ಟಿತು ಹೊಸ ಕಂಬಳಿಯ
ನರಿ ಕೊಟ್ಟಿತು ಕರಿ ಕನ್ನಡಕವ
ಕರಡಿ ಕೊಟ್ಟಿತು ಓವರ್ ಕೋಟ
ಒಂಟೆ ಕೊಟ್ಟಿತು ಕಾಲಿಗೆ ಬೂಟ
ಸಿಂಹ ಕೊಟ್ಟಿತು ಮಫ್ಲರ್ ಪೇಟ
ಮಂಗ ಕೊಟ್ಟಿತು ಮಂಕಿ ಕ್ಯಾಪ
ಅಳಿಲು ಕೊಟ್ಟಿತು ಬಟಾಣಿಯೊಂದ

ಇಷ್ಟು ಸಾಕೆಂದನು ಪುಟ್ಟ
ನಿಮ್ಮ ಶುಭ ಹಾರೈಕೆಗೆ ನಾನಾಭಾರಿ